ಬೆಳೆದ ಅಡಿಕೆಯಲ್ಲಿ ಸ್ವಲ್ಪ ಕವಳಕ್ಕೆ ಮೀಸಲಿಟ್ಟರೆ ತಪ್ಪೇನು? ಇದು ನನ್ನ ಇತ್ತೀಚೆಗಿನ ನಿಲುವು. ಮತ್ತು ಕವಳ ಸಂಚಿಯ ಸ್ಥಾಪನೆ. ಹಾಗೂ ಇದು ನನ್ನ ಅಂಗಡಿಗೆಂದು ಹಲವಾರು ಅಜ್ಜಿಯರು ಬರುವುದಕ್ಕೂ ಕಾರಣವಾಯಿತು.

ಹೀಗೆ ಬರುವ ಹಲವಾರು ಅಜ್ಜಿಯರಲ್ಲಿ ಗಂಗಜ್ಜಿ ಒಬ್ಬಳು. ಸಮೀಪದ ವಳಗೆರೆಯ ಹತ್ತಿರದಲ್ಲೆಲ್ಲೋ ಅವಳ ಮನೆಯಿದೆ. ನಾನು ಅವಳ ಮನೆ ನೋಡಿಲ್ಲ. ಆದರೆ, ಅವಳ ಕುಟುಂಬದ ವಿಷಯ ಎಲ್ಲಾ ನನಗೆ ಗೊತ್ತಿದೆ. ಹಿಂದೆ ಅವಳ ಗಂಡ ನಾಗ ಮೊದಲು ನಮ್ಮ ಮನೆಯ ಅಡಿಕೆ ಕೊನೆ ಕೊಯ್ಯುತ್ತಿದ್ದ. ಶ್ರಮಜೀವಿ. ಊರಿನ ಹೆಚ್ಚಿನ ಎಲ್ಲಾ ಮನೆಯ ಅಡಿಕೆ ಕೊನೆ ಕೊಯ್ಯುವುದು ಅವನ ವೃತ್ತಿ. 60–70 ಅಡಿ ಎತ್ತರದ ಮರ ಹತ್ತಿ ನಾಜೂಕಾಗಿ ಕೊನೆ ಕೊಯ್ಯುವುದು ಅವನಿಗೆ ಸಲೀಸು. ಎಲ್ಲರೂ ಅಡಿಕೆ ಕೊನೆ ಕೊಯ್ಯಲು, ಔಷಧಿ ಹಾಕಲು ಅವನನ್ನೇ ಅಪೇಕ್ಷಿಸುತ್ತಿದ್ದರು. ಯಾರನ್ನೂ ಅವನು ನಿಷ್ಠುರ ಮಾಡಿಕೊಂಡವನಲ್ಲ. ಅವನಷ್ಟು ದುಡಿಮೆ ಊರಲ್ಲಿ ಯಾರಿಗೂ ಇಲ್ಲ ಎಂದು ಊರವರು ಮಾತಾಡುತ್ತಲೇ ಇರುತ್ತಾರೆ. ಹಾಗಂತ ಅವನ ಕುಟುಂಬ ಸುಖವಾಗಿದೆ ಎಂದು ನನಗಂತೂ ಅನಿಸಿಲ್ಲ. ಅವನ ಹೆಂಡತಿ ಗಂಗಜ್ಜಿ ಹೇಳುವುದನ್ನು ಕೇಳಬೇಕು. ನಾಗ ಅಷ್ಟು ದುಡಿಮೆಯಿದ್ದರೂ ಅವನು ಮನೆಗೆ ಬರುವುದೇ ಕಡಿಮೆಯಂತೆ. ಎಲ್ಲಿಗೆ ಹೋಗುತ್ತಾನೋ? ಬರುತ್ತಾನೋ? ದುಡ್ಡಿಲ್ಲದಿದ್ದರೂ ಎಣ್ಣೆ ಕುಡಿಸುವವರಿಗೇನೂ ಕೊರತೆಯಿಲ್ಲ. ದುಡಿಮೆ ಇರುವವನು ದುಡ್ಡು ಹೇಗಾದರೂ ಕೊಡುತ್ತಾನೆ ಎಂಬ ಭರವಸೆ ಎಣ್ಣೆ ಅಂಗಡಿಯವರಿಗೆ.

ಹೆಂಡತಿ ಗಂಗ ಪಡುವ ಕಷ್ಟ ಮಾತ್ರ ದೇವರಿಗೇ ಪ್ರೀತಿ.

ಸಾರಾಯಿಯೊಂದೇ ಅವನ ಹವ್ಯಾಸವಾಗಿದ್ದರೆ ಗಂಗ ಯೋಚಿಸುತ್ತಿರಲಿಲ್ಲ. ಅವನಿಗೆ ಬೇರೆ ಬೇರೆ ಹೆಂಗಸರ ಸಂಗವೂ ಇದೆ. ಮತ್ತು ಅವನು ದುಡಿದದ್ದನೆಲ್ಲಾ ಅವರಿಗೇ ಸುರಿಯುತ್ತಾನೆ. ಎಲ್ಲೋ ಅಪರೂಪಕ್ಕೊಮ್ಮೆ ಮನೆಗೆ ಬರುತ್ತಾನೆ. ಹುಟ್ಟಿನಿಂದ ಇಲ್ಲಿಯವರೆಗೆ ಗಂಗ ಸುಖವೆಂದರೇನೆಂದೇ ಕಂಡವಳಲ್ಲ.

ಗಂಡು ಮಗ ಬೇಕೆಂಬ ನಿರೀಕ್ಷೆಯಲ್ಲಿದ್ದ ಅವಳ ತಂದೆ ತಾಯಿಗಳಿಗೆ ಗಂಗ ಹೆಣ್ಣಾಗಿ ಹುಟ್ಟಿಬಿಟ್ಟಿದ್ದಳು. ಅಲ್ಲಿಂದಲೇ ಅವಳಿಗೆ ತಂದೆ ತಾಯಿ ನಿರ್ಲಕ್ಷ್ಯ ಅಭ್ಯಾಸವಾಗಿ ಹೋಗಿತ್ತು. ಯಾರು ಏನು ಹೇಳಿದರೂ ಅಪ್ಪ ಅಮ್ಮ ಅವಳನ್ನು ಶಾಲೆಗೆ ಸೇರಿಸಲೇ ಇಲ್ಲ. ಅವರಿವರ ಮನೆಕೆಲಸ ಮಾಡುತ್ತಾ ಬಾಲ್ಯ ಕಳೆದುಹೋಯಿತು. ಹದಿಮೂರನೇ ವಯಸ್ಸಿಗೆ ಅವಳನ್ನು ನಾಗನಿಗೆ ಮದುವೆ ಮಾಡಿ ಕೈತೊಳೆದುಕೊಂಡರು. ಅವರಿಗೂ ವಯಸ್ಸಾಗುತ್ತಾ ಬಂದಿತ್ತು. ಅವಳನ್ನು ಮನೆಯಿಂದ ಸಾಗಹಾಕುವುದು ಅನಿವಾರ್ಯವೆಂಬಂತೆ ಮದುವೆ ನಡೆದುಹೋಯಿತು. ಕೆಲವು ವರ್ಷ ನಾಗನೊಂದಿಗೆ ಕಳೆದದ್ದೇ ಸುಖವೆಂಬಂತೆ ಮಗನೂ ಹುಟ್ಟಿದ.

ಈಗ ವಯಸ್ಸಾಗಿದೆ. ನಾಗನೂ ತೀರಿಹೋಗಿದ್ದ. ಮಗ ನಾರಾಯಣ ಮದುವೆಯಾಗಿದ್ದಾನೆ.

ಅವನ ಹೆಂಡತಿ ಗಯ್ಯಾಳಿ. ಅತ್ತೆ ಕಂಡರೆ ಸಿಡಿಮಿಡಿಗೊಳ್ಳುತ್ತಾ ಇರುತ್ತಾಳೆ. ಮಗ ಈಗ ಬೇರೆ ಮನೆ ಮಾಡಿದ್ದಾನೆ. ಗಂಗಜ್ಜಿ ಮನೆಯಲ್ಲಿ ಒಬ್ಬಳೇ ಇರುತ್ತಾಳೆ. ಮಗ ಹೆಂಡತಿಯ ಕಣ್ಣು ತಪ್ಪಿಸಿ ತಾಯಿ ಮನೆಗೆ ಬರುತ್ತಾನೆ. ಏನಾದರೂ ಇದ್ದರೆ ಕೊಡುತ್ತಾನೆ.

ಗಂಗ ಈಗ ಗಂಗಜ್ಜಿ. ಅಡಿಕೆ ಸುಲಿಯುವುದೋ ಮತ್ತಿತರ ಸಣ್ಣಪುಟ್ಟ ಕೆಲಸ ಮಾಡಿ ಅಷ್ಟಿಷ್ಟು ಸಂಪಾದಿಸುತ್ತಾಳೆ. ಒಮ್ಮೆ ಅವಳು ಬಂದಿದ್ದಾಗ ತನ್ನ ಪರಿಸ್ಥಿತಿಯನ್ನೆಲ್ಲಾ ವಿವರಿಸಿ, 'ನನಗೊಂದು ವೃದ್ಧಾಪ್ಯವೇತನ ಬರುವಂತೆ ಮಾಡಿ ಒಡೆಯಾ' ಎಂದು ನನ್ನನ್ನು ಕೇಳಿಕೊಂಡಿದ್ದಳು. ನಿಜಕ್ಕೂ ಅವಳಿಗೆ ವೃದ್ಧಾಪ್ಯವೇತನದ ಅವಶ್ಯಕತೆ ಇತ್ತು. ನಾನು ಪಂಚಾಯ್ತಿ ಸದಸ್ಯ ರಂಗಪ್ಪನ ಹತ್ತಿರ ಅವಳನ್ನು ಕರೆದುಕೊಂಡು ಹೋಗಿ, ಅವಳಿಗೆ ವೃದ್ಧಾಪ್ಯವೇತನ ಬರುವಂತೆ ಮಾಡಲು ಹೇಳಿದ್ದೆ.